**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ**

**ಸಿ ಸಿ. 229/2024**

**ಸಿಡಬ್ಲೂ. 8 ಪಿಡಬ್ಲೂಃ 6**

| | |
|---|---|
| **ಸಾಕ್ಷಿಯ ಹೆಸರು** | **ದೇವರಾಜು ಡಿ** |
| **ತಂದೆ ಹೆಸರು** | **ದೇವರಸೇಗೌಡ** |
| **ವಯಸ್ಸು** | **54 ವರ್ಷ** |
| **ಉದ್ಯೋಗ** | **ಎ ಎಸ್ ಐ, ಪಾಂಡವಪುರ ಪೊಲೀಸ್ ಠಾಣೆ** |
| **ವಾಸ** | **ಪಾಂಡವಪುರ** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 06.07.2026**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ನಾನು 2021 ರಿಂದ 2024 ರವರೆಗೆ ಕೆ ಆರ್ ಎಸ್ ಪೋಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ 16.06.2024 ರಂದು ನಾನು ಠಾಣೆಯ ಠಾಣಾ ಪ್ರಭಾರದಲ್ಲಿದ್ದಾಗ ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂಖ್ಯೆ 97/2024 ರಡಿಯಲ್ಲಿ ಗುನ್ನೆಯನ್ನು ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಆ ದಿನ ಸ್ವೀಕರಿಸಿದ ದೂರನ್ನು ಈಗ ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು

ನಿಪಿ.1 ಬಿ ಎಂದು ಗುರ್ತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ.6 ಎಂದು, ಸಾಕ್ಷಿಯ ಸಹಿಯನ್ನು ನಿಪಿ.6 ಎ ಎಂದು ಗುರ್ತಿಸಲಾಯಿತು.

2.ದಿಃ 17.06.2024 ರಂದು ಈ ಪ್ರಕರಣದ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ.5 ಮತ್ತು 6 ರವರಿಗೆ ನೋಟೀಸು ಜಾರಿ ಮಾಡಿ ಕೃತ್ಯ ಸ್ಥಳದ ಪಂಚನಾಮೆಯನ್ನು ಜರುಗಿದೆನು. ಚಾಸಾ1 ರವರು ಕೃತ್ಯ ಸ್ಥಳವನ್ನು ತೋರಿಸಿದರು. ಕೃತ್ಯ ಸ್ಥಳದ ಫೋಟೋ ತೆಗೆಸಿದೆನು. ಸದರಿ ಮಹಜರನ್ನು ಈಗ ನೋಡುತ್ತಿದ್ದು ನಿಪಿ.2 ಎಂದು ಈಗಾಗಲೇ ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.2 ಸಿ ಎಂದು ಗುರುತಿಸಲಾಯಿತು. ಪಂಚರಿಗೆ ನೀಡಿರುವ ನೋಟೀಸನ್ನು ನಿಪಿ.5 ಎಂದು ಈಗಾಗಲೇ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.5 ಬಿ ಎಂದು ಗುರುತಿಸಲಾಯಿತು. ನಿಪಿ.3 ರಲ್ಲಿ ಸಾಕ್ಷಿ ತಾನಿರುವುದಾಗಿ ನೋಡಿ ಗುರುತಿಸಿರುತ್ತಾರೆ. ಮಹಜರು ಕಾಲದಲ್ಲಿ ಒಂದು ಕುಡುಗೋಲು ಹಾಗೂ ಒಂದು ಮರದ ದೊಣ್ಣೆಯನ್ನು ವಶ ಪಡಿಸಿಕೊಂಡೆನು. ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಜಪ್ತಿ ಮಾಡಿಕೊಂಡ ಮಾಲುಗಳನ್ನು ಠಾಣಾ ಸ್ವತ್ತು ಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು. ಒಂದು ಸಿಡಿಯನ್ನು ನಿಪಿ.7 ಎಂದು ಗುರುತಿಸಲಾಯಿತು. ದಿಃ 18.06.2024 ರಂದು 1 ರಿಂದ 7 ನೇ ಆರೋಪಿಗಳು ಎಲ್ಲರಿಗೂ 41 ನೋಟೀಸನ್ನು

ಜಾರಿ ಮಾಡಿದೆನು. ಸದರಿ ನೋಟೀಸುಗಳನ್ನು ಕ್ರಮವಾಗಿ ನಿಪಿ.8 ರಿಂದ 14 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.8 ಎ ರಿಂದ ನಿಪಿ.14 ಎ ಎಂದು ಗುರುತಿಸಲಾಯಿತು.

2. ದಿಃ 17.06.2024 ರಂದು ಚಾಸಾ.2 ರಿಂದ 4 ರವರ ಹೇಳಿಕೆಗಳನ್ನು ಪಡೆದುಕೊಂಡೆನು. ಚಾಸಾ.1 ರವರಿಂದ ಒಂದು ಆರ್ ಟಿ ಸಿ ಪಡೆದು ಕಡತಕ್ಕೆ ಅಳವಡಿಸಿಕೊಂಡೆನು. ಸದರಿ ಎರಡು ಆರ್ ಟಿ ಸಿ ಗಳನ್ನು ಕ್ರಮವಾಗಿ ನಿಪಿ.15 ಮತ್ತು 16 ಎಂದು, ಸಾಕ್ಷಿ ಸಹಿಗಳನ್ನು ನಿಪಿ.15 ಎ ಮತ್ತು ನಿಪಿ.16 ಎ ಎಂದು ಗುರುತಿಸಲಾಯಿತು. ನಂತರ ದಿಃ 18.07.2024 ರಂದು ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರಿಸಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿ ವೇದಿಸಿಕೊಂಡೆನು. ಆರೋಪಿಗಳನ್ನು ಹಾಗೂ ಮುದ್ದೆಮಾಲುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 8 ನೇ ಆರೋಪಿ ಪರ ವಕೀಲರಿಂದಃ**

3. ಈ ದೂರಿಗೆ ಮೊದಲು ಆರೋಪಿಗಳ ವಿರುದ್ಧ ಠಾಣೆಗೆ ದೂರು ಬಂದಿತ್ತಾ ಎಂದರೆ ಸಾಕ್ಷಿ ನೆನಪಿಲ್ಲವೆಂದು ಹೇಳುತ್ತಾರೆ. ದೂರಿನ ಸಂಗತಿಗಳನ್ನು ನಾನು ಕುಲಂಕುಷವಾಗಿ ಪರಿಶೀಲನೆ ಮಾಡಿದ್ದೇನೆ. ನಿಪಿ.1 ನ್ನು ನೀಡುವ ಪೂರ್ವದಲ್ಲಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಆ ವಿಚಾರವಾಗಿ ಪೊಲೀಸರು ಸ್ಥಳ ಪರಿಶೀಲನೆ ಮಾಡಿ ತಿಳುವಳಿಕೆ ನೀಡಿದ್ದರು ಎಂದು ಇದೆ ಎಂದು ನಮೂದಿದೆ ಎಂದರೆ ಸರಿ. ನಿಪಿ.1 ಸ್ವೀಕರಿಸುವ ಪೂರ್ವದಲ್ಲಿ ಆರೋಪಿಗಳಿಗೆ ತಿಳುವಳಿಕೆ ನೀಡಿರುತ್ತೀರಾ ಎಂದರೆ ಸಾಕಿ ನೆನಪಿಲ್ಲವೇಂದು ಹೇಳುತ್ತಾರೆ.

ಆರೋಪಿಗಳನ್ನು ಈಗ ನೋಡಿ ಅವರುಗಳ ಹೆಸರನ್ನು ಹೇಳಲು ನನಗೆ ಆಗುವುದಿಲ್ಲ. 8 ನೇ ಆರೋಪಿ ಯಾರೆಂದು ಈಗ ಹೇಳಲಾಗುವುದಿಲ್ಲ ಎಂದರೆ ಸರಿ. 8 ನೇ ಆರೋಪಿ ಎಲ್ಲಿ ವಾಸ ಇದ್ದರು ಎಂದು ನೀವು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಗಿರಿಯಾರಹಳ್ಳಿ ವಾಸಿ ಎಂದು ಹೇಳುತ್ತಾರೆ. 8 ನೇ ಆರೋಪಿ ಗಿರಿಯಾರಹಳ್ಳಿಯಲ್ಲಿ ವಾಸ ಇಲ್ಲ ಎಂದರೆ ಸರಿಯಲ್ಲ. 8 ನೇ ಆರೋಪಿ ಮೈಸೂರಿನಲ್ಲಿ ವಾಸ ಎಂದರೆ ಸರಿಯಲ್ಲ. 8 ನೇ ಆರೋಪಿ ಗಿರಿಯಾರಹಳ್ಳಿ ಗ್ರಾಮದಲ್ಲಿ ವಾಸ ಇಲ್ಲ ಎಂದು ದಾಖಲೆ ಪಡೆದುಕೊಂಡಿಲ್ಲ ಎಂದರೆ ಸರಿ.

4. 11.30 ಗಂಟೆಗೆ ಮಹಜರು ಮಾಡಲು ಹೋದೆನು. ಸ್ಥಳದಲ್ಲಿ ಪಂಚರಿಗೆ ನೋಟೀಸು ನೀಡಿದೆನು. ಪಂಚರು ಸ್ಥಳದಲ್ಲಿ ಇದ್ದ ಬಗ್ಗ ನಿಮಗೆ ಪೂರ್ವ ಮಾಹಿತಿ ಇತ್ತಾ ಎಂದರೆ ಸಾಕ್ಷಿ ಸ್ಥಳಕ್ಕೆ ಹೋದಾಗ ಅವರು ಇದ್ರು ಅವರಿಗೆ ನೋಟೀಸು ಜಾರಿ ಮಾಡಿದೆವು ಎಂದು ಹೇಳುತ್ತಾರೆ. ಪಂಚರು ಅದೇ ಸ್ಥಳದಲ್ಲಿದ್ದರಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಪಂಚರನ್ನು ಸ್ಥಳಕ್ಕೆ ಯಾರು ಕ ರೆದುಕೊಂಡು ಬಂದಿದ್ದರು ಎಂದರೆ ಸಾಕ್ಷಿ ಪಂಚರು ಅಲ್ಲೆ ಇದ್ದರು ಎಂದು ಹೇಳುತ್ತಾರೆ.ಪಂಚರು ಎನು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ಕೂಲಿ ಕೆಲಸಕ್ಕೆ ಅಲ್ಲಿಗೆ ಬಂದಿದರು ಎಂದು ಹೇಳುತ್ತಾರೆ. ಅದೇ ಜಮೀನಿನಲ್ಲಿ ಕೆಲಸ ಮಾಡಲು ಪಂಚರು ಬಂದಿದ್ದರಾ ಎಂದರೆ ಸಾಕ್ಷಿ ಗೊತ್ತಿಲ್ಲ ಸ್ಥಳದಲ್ಲಿದ್ದರು ಎಂದು ಹೇಳುತ್ತಾರೆ. ಮಹಜರು ಮಾಡುವ ಪೂರ್ವದಲ್ಲಿ ಪಂಚರನ್ನು ಬರಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಮಹಜರು ಮಾಡುವ ಪೂರ್ವದಲ್ಲಿ ಪಂಚರಿಗೆ ನೋಟೀಸು ನೀಡಿ ಕರೆದುಕೊಂಡು

ಹೋಗಬೇಕು ಎಂದರೆ ಸರಿ. ಚಾಸಾ.1 ರವರಿಗೆ ಅನುಕೂಲವಾಗುವಂತೆ ಅವರಿಗೆ ಬೇಕಾದ ಜನಗಳನ್ನು ಕರೆದುಕೊಂಡು ಬಂದು ಪಂಚರನ್ನಾಗಿ ಸಹಿ ಮಾಡಿಸಿರುತ್ತೀರಾ ಎಂದರೆ ಸರಿಯಲ್ಲ. ಮಹಜರು ಮಾಡುವ ಮೊದಲು ಪಂಚರಿಗೆ ನೋಟೀಸು ನೀಡಿದೆನು.

5. ಚಾಸಾ.1 ರವರಿಗೆ 8 ಎಕರಕೆ ಜಮೀನಿದೆ ಎನ್ನುವ ಬಗ್ಗೆ ದಾಖಲೆ ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸಿ ಚಾಸಾ.1 ರವರು ನೀಡಿದ ಆರ್ ಟಿ ಸಿಗಳನ್ನು ಪಡೆದುಕೊಂಡಿದ್ದೇನೆಂದು ಹೇಳುತ್ತಾರೆ. ನಿಪಿ.15 ಮತ್ತು 16 ರಲ್ಲಿ 8 ಎಕರೆ ಜಮೀನು ಇಲ್ಲ ಎಂದರೆ ಸರಿ. ನೀವು 8 ಎಕರೆಗೆ ಸಂಬಂಧಪಟ್ಟ ದಾಖಲೆಗಳನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಿಲ್ಲ ಎಂದರೆ ಸರಿ. ನಿಮ್ಮ ದೋಷಾರೋಪಣ ಪಟ್ಟಿ ಪಕ್ಷಪಾತದಿಂದ ಕೂಡಿದೆ ಎಂದರೆ ಸರಿಯಲ್ಲ. ನಿಪಿ.2 ನ್ನು ತನಿಖಾ ಸಹಾಯಕರ ಕಡೆಯಿಂದ ಬರೆಸಿದೆನು. ತನಿಖಾ ಸಹಾಯಕ ಚನ್ನಂಕ ನಿಪಿ.2 ಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ. ಚನ್ನಂಕರವರನ್ನು ಸಾಕ್ಷಿ ಪಟ್ಟಿಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ.

6. ನಿಪಿ.2 ರ ಪೂರ್ವಕ್ಕೆ ಏನಿದೆ ಎಂದರೆ ಸಾಕ್ಷಿ ಸುಬ್ಬಯ್ಯನವರ ಜಮೀನು ಎಂದದು ಹೇಳುತ್ತಾರೆ ಪಶ್ಚಿಮಕ್ಕೆ ನಿಂಗಪ್ಪ, ದಕ್ಷಿಣಕ್ಕೆ ಮರೀಗೌಡ ಹಾಗೂ ಉತ್ತರಕ್ಕೆ ಸಣ್ಣನಿಂಗಮ್ಮ ಎಂದು ಹೇಳುತ್ತಾರೆ. ದಕ್ಷಿಣಕ್ಕೆ ಮರೀಗೌಡರ ಜಮೀನು ಯಾರು ಎಂದು ತಿಳಿದುಕೊಂಡಿರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. 8 ನೇ ಆರೋಪಿಯ ತಂದೆ

ಹೆಸರು ಮರೀಗೌಡ. ದಕ್ಷಿಣಕ್ಕೆ ಇರುವ ಜಮೀನು 8 ನೇ ಆರೋಪಿಯ ತಂದೆಯದ್ದು ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ನಿಪಿ.3 ನ್ನು ನೋಡಿ ದಿಕ್ಕುಗಳನ್ನು ಹೇಳಲಾಗುವುದಿಲ್ಲ. ನಿಪಿ.1 ರಲ್ಲಿ ಮೊದಲಿದ್ದ ನೀಲಗಿರಿ ಗಿಡಗಳನ್ನು ತೆಗೆದು ಜೆ ಸಿ ಬಿ ಯಿಂದ ಉಳುಮೆ ಮಾಡುತ್ತಿದ್ದಾರೆಂದು ಹೇಳಿದ್ದಾರೆಂದರೆ ಸರಿ. ನಿಪಿ.3 ರಲ್ಲಿ ಜೆ ಸಿ ಬಿ ಯಲ್ಲಿ ಉಳುಮೆ ಮಾಡಿರುವುದು ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಜೆಸಿಬಿಯನ್ನು ನಾನು ನೋಡಿದ್ದೇನೆ. ಜೆ ಸಿ ಬಿ ಯಿಂದ ಉಳುಮೆ ಮಾಡಲಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ.3 ರಲ್ಲಿ ಜೆಸಿಬಿಯಿಂದ ಉಳುಮೆ ಮಾಡಿಲ್ಲ ಎಂದರೆ ಸಾಕ್ಷಿ ಮಟ್ಟ ಮಾಡಿದ್ದಾರೆಂದು ಹೇಳುತ್ತಾರೆ. ನಿಪಿ.3 ರಲ್ಲಿ ಬದುವಿನ ಕುರುಹು ಕಾಣುತ್ತಿಲ್ಲ ಎಂದರೆ ಸರಿಯಲ್ಲ.

7. ನಿಪಿ.3 ರಲ್ಲಿ ತೆಗೆದ ಸಮಯ ಮತ್ತು ದಿನಾಂಕ ಇಲ್ಲ ಎಂದರೆ ಸರಿ. ಡಿಜಿಟಲ್ ಕ್ಯಾಮೇರಾದಿಂದ ಫೋಟೋ ತೆಗೆಸಿಲ್ಲ ಎಂದರೆ ಸರಿ. ಚಾಸಾ.1 ರವರು ರಾಜಕೀಯ ಪ್ರಭಾವಿ ಹಾಗೂ ಹಲವಾರು ಚುನಾಯಿತ ಪ್ರತಿನಿಧಿ ಎಂದರೆ ಸರಿ. ಚಾಸಾ.1 ರವರ ರಾಜಕೀಯ ಪ್ರಭಾವಕ್ಕೆ ಒಳಪಟ್ಟು ಸುಳ್ಳು ದೋಷಾರೋಪಣ ಪಟ್ಟಿ ತಯಾರಿಸಿದೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. 1 ರಿಂದ 7 ನೇ ಆರೋಪಿಗಳು ಚಾಸಾ.1 ರವರ ವಿರುದ್ಧ ಅಸಲು ದಾವೆ ಸಂಃ 167/2024 ದಾವೆ ಹೂಡಿದ್ದಾರೆಂದರೆ ಸರಿ. ಆರೋಪಿಗಳ ವಿರುದ್ಧ ಸಿವಿಲ್ ದಾವೆಯಲ್ಲಿ ಚಾಸಾ.1 ರವರಿಗೆ ಅನುಕೂಲವಾಗಲಿ ಎಂದು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೀರಾ ಎಂದರೆ ಸರಿಯಲ್ಲ.

ಚಾಸಾ.1 ರವರು ದುರ್ಲಾಭ ಹೊಂದಲು ಈ ಸುಳ್ಳು ದೂರು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಕೃತ್ಯಕ್ಕು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

8. ಚಾಸಾ1 ರವರು ಸ್ಥಳದಲ್ಲೆ ಮುದ್ದೆಮಾಲುಗಳನ್ನು ಕೊಟ್ಟರು. ಮುದ್ದೆಮಾಲುಗಳ ಮೇಲೆ ವಿಶೇಷ ಗುರುತು ಇಟ್ಟುಕೊಂಡಿಲ್ಲ. ಮುದ್ದೆಮಾಲುಗಳು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸಣ್ಣ ಬೇವಿನಮರ ಘಟನಾ ಸ್ಥಳದಿಂದ ಎಷ್ಟು ದೂರದಲ್ಲಿದೆ ಎಂದರೆ ಸಾಕ್ಷಿ ನೆನಪಿಲ್ಲವೆಂದು ಹೇಳುತ್ತಾರೆ. ಚಾಸಾ.1 ರವರಿಗೆ ತುರ್ತು ಕೆಲಸ ಇದುದ್ದರಿಂದ ದಿಃ 16.06.2024 ರಂದು ದೂರು ನೀಡಿದ್ದಾರೆ. ಚಾಸಾ.1 ರವರಿಗೆ ಯಾವ ತುರ್ತು ಕೆಲಸ ಇತ್ತು ಎಂದು ತನಿಖೆ ನಡೆಸಿಲ್ಲ. ದಿಃ 02.06.2024 ರಿಂದ 17.06.2024 ರವರಿಗೆ ಮುದ್ದೆಮಾಲುಗಳು ಸ್ದಳದಲ್ಲೆ ಬಿದ್ದಿದ್ದವಾ ಎಂದರೆ ಸಾಕ್ಷಿ ಬಿದ್ದಿದ್ದವು ಎಂದು ಹೇಳುತ್ತಾರೆ. ಕುಡುಗೋಲು ಸ್ದಳದಲ್ಲಿ ಇದ್ದರೆ ಯಾರಾದರೂ ಎತ್ತಿಕೊಂಡು ಹೋಗುವ ಸಾಧ್ಯತೆ ಇರುತ್ತದೆ ಎಂದರೆ ಸಾಕ್ಷಿ ಇಲ್ಲ ಹಳ್ಳಿಯ ಕಡೆ ಅಲ್ಲೆ ಇಟ್ಟಿರುತ್ತಾರೆಂದು ಹೇಳುತ್ತಾರೆ. ಮುಮಾ.1 ಮತ್ತು 2 ಮಣ್ಣಿ ಮೆತ್ತಿಕೊಂಡಿರುವ ಕುರುಹು ಇಲ್ಲ ಎಂದರೆ ಸರಿ. ಸಾಕ್ಷಿ ಮೆತ್ತಿಕೊಂಡಿದ್ದು ಬಿದ್ದು ಹೋಗಿದೆ ಎಂದು ಹೇಳುತ್ತಾರೆ. ನಿಪಿ.2 ರಲ್ಲಿ ಮುಮಾ.1 ಮತ್ತು 2 ಕ್ಕೆ ಮಣ್ಣಿ ಮೆತ್ತಿಕೊಂಡಿತ್ತು ಎಂದು ನಮೂದಿಸಿಲ್ಲ. ನೀವು ಮತ್ತು ಚಾಸಾ.1 ರವರು ಮುಮಾ.1 ಮತ್ತು 2 ನ್ನು ಸೃಷ್ಟಿಸಿರುತ್ತೀರಾ ಎಂದರೆ ಸರಿಯಲ್ಲ.

***ಪಾಟೀ ಸವಾಲುಃ 1 ರಿಂದ 7 ನೇ ಆರೋಪಿಗಳ ಪರ ವಕೀಲರಿಂದಃ***

*9. ಪೂರ್ವ ಭಾಗಕ್ಕೆ ಆರೋಪಿಗಳ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಈ ಜಮೀನು ಆದ ನಂತರ ಕೆ ಆರ್ ಎಸ್ ಬ್ಯಾಕ್ ವಾಟರ್ ಬರುತ್ತದೆ ಎಂದರೆ ಸರಿ. ನೀಲಗಿರಿ ಬೇರನ್ನು ಚಾಸಾ.1 ತೆಗೆಸಿದ ಬಗ್ಗೆ ಕುರುಹುಗಳು ಸ್ಥಳದಲ್ಲಿತ್ತು. ಚಾಸಾ.1 ರವರು ಆರೋಪಿಗಳ ಜಮೀನನ್ನು ಹೊಡೆದುಕೊಳ್ಳಬೇಕೆಂದು ಸುಳ್ಳು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗಳು ಎಲ್ಲರು ತಮ್ಮ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಅದು ಗೊತ್ತಿಲ್ಲವೆಂದು ಹೇಳುತ್ತಾರೆ. ಬದು ಪೂರ್ವ ಪಶ್ಚಿಮ ಇತ್ತೋ ಅಥವಾ ಉತ್ತರ ದಕ್ಷಿಣ ಇತ್ತೋ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ಎಷ್ಟು ಬದುಗಳು ಇತ್ತು ಎಂದು ನಿಪಿ.2 ರಲ್ಲಿ ಬರೆದಿಲ್ಲ. ಚಾಸಾ.1 ರವರು ಹೊಂದಿರುವ ರಾಜಕೀಯ ಪ್ರಭಾವವನ್ನು ನಿಮ್ಮ ಮೇಲೆ ಬೀರಿ ನಿಮ್ಮ ಸಹಾಯದಿಂದ ಅಸಹಾಯಕ ಆರೋಪಿಗಳ ಜಮೀನುಗಳನ್ನು ಬ್ಯಾಕ್ ವಾಟರ್ ವರೆಗೆ ಹೊಡೆದುಕೊಳ್ಳಬೇಕೆಂದು ಈ ಸುಳ್ಳು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ.ಪಾಂಡವಪುರ.***